ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/09/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| **ಶ್ರೀ.1)ಶಿವಪ್ಪ ತಂದೆ ಆಡೂರು ಮಲ್ಲಪ್ಪ,ಮಾಗಳ<br>2) ಹಲಿಗೇರಿ ಶಿವಯೋಗಪ್ಪ ತಂದೆ ರಾಚೋಟೆಪ್ಪ ,ಹಿರೇಹಡಗಲಿ** | **ಶ್ರೀಮತಿ ಸೌಭಾಗ್ಯ ಗಂಡ ಶಿವಪ್ಪ, ಮಾಗಳ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಮಾಗಳ | 240 | 5.02 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ಶ್ರೀ ಶಿವಪ್ಪ ತಂದೆ ಆಡೂರು ಮಲ್ಲಪ್ಪ,ಮಾಗಳ ಇವರು ದಿನಾಂಕ 19/05/2015 ರಂದು ನೊಂದಾಯಿತ ದಸ್ತಾವೇಜು ಸಂಖ್ಯೆ 643/2015-16 ರಲ್ಲಿ ರೂ 8,59,000/- ಗಳಿಗೆ ಶ್ರೀ ಹಲಿಗೇರಿ ಶಿವಯೋಗಪ್ಪ ತಂದೆ ರಾಚೋಟೆಪ್ಪ ಇವರಿಗೆ ಮಾರಾಟ ಮಾಡಿದ ಮೇರೆಗೆ ಎಂ ಆರ್ ಸಂಖ್ಯೆ ಹೆಚ್192/2014-15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಶ್ರೀ ಮತಿ ಸೌಭಾಗ್ಯ ಆಡೂರು ಗಂಡ ಶಿವಪ್ಪ ಇವರು ತಕರಾರು ಸಲ್ಲಿಸಿದ ಮೇರೆಗೆ ಕಂದಾಯ ನೀರೀಕ್ಷಕರು ಹಡಗಲಿ ಇವರು ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 03/09/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ದಿನಾಂಕ 15/10/2015 ಅಂತಿಮಗೊಳಿಸಲಾಯಿತು. ವಿಚಾರಣೆಗೆ ವಾದಿಗಳು ಮತ್ತು ಪ್ರತಿವಾದಿಗಳು ಹಾಜರಾಗಿ ರಾಜಿ ಸಂಧಾನ ಪತ್ರವನ್ನು ಸಲ್ಲಿಸಿದ್ದು ಸದರಿ ಒಪ್ಪಿಗೆ ಪತ್ರದ ಮೇರೆಗೆ ಶ್ರೀಮತಿ ಸೌಭಾಗ್ಯ ಇವರು ತಮ್ಮ ತಕರಾರನ್ನು ಹಿಂಪಡೆದುಕೊಂಡು ಖರೀದಿದಾರರ ಹೆಸರಿನಲ್ಲಿ ಪಟ್ಟಾ ಬದಲಾವಣೆ ಮಾಡಲು ತಮ್ಮ ತಕರಾರು ಇರುವುದಿಲ್ಲವೆಂದು ಒಪ್ಪಿಗೆ ನೀಡಿರುತ್ತಾರೆ ಕಾರಣ ಈ ಕೆಳಕಂಡ

**ಆದೇಶ**

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ಪ್ರಕರಣದಲ್ಲಿ ಪ್ರತಿವಾದಿ ಸೌಭಾಗ್ಯ ಆಡೂರು ಗಂಡ ಶಿವಪ್ಪ ಇವರು ಒಪ್ಪಿಗೆ ಪತ್ರ ನೀಡಿದ ಮೇರೆಗೆ ನೊಂದಾಯಿತ ದಸ್ತಾವೇಜು ಸಂಖ್ಯೆ 643/2015-16 ದಿನಾಂಕ 19/05/2015 ಪ್ರಕಾರ ಖರೀದಿದಾರರಾದ ಹಲಿಗೇರಿ ಶಿವಯೋಗಪ್ಪ ತಂದೆ ರಾಚೋಟೆಪ್ಪ ,ಹಿರೇಹಡಗಲಿ ಇವರ ಹೆಸರಿಗೆ ಈ ಕೆಳಕಂಡ ದಾವಾ ಜಮೀನನ್ನು ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಮಾಗಳ | 240 | 5.02 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26–05–2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
**ಹಡಗಲಿ.**

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.